

**ವಿಕ್ರಂ ಹತ್ವಾರ್**

ಹೊಸ ತಲೆಮಾರಿನ ಮಹತ್ವದ ಕತೆಗಾರ ವಿಕ್ರಂ 'ಜೀರೋ ಮತ್ತು ಒಂದು' ಎಂಬ ಕಥಾ ಸಂಗ್ರಹ ಹಾಗೂ 'ಇದೇ ಇರಬೇಕು ಕವಿತೆ', 'ಅಕ್ಷೀ... ಎಂದಿತು ವೃಕ್ಷ!' ಎಂಬ ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯೋಗಿ.

- **ಇಂಥ ಬರವಣಿಗೆಗೆ ನಿಮ್ಮೊಳಗೊಂದು ಏಕಾಂತದ ಅವಶ್ಯಕತೆ ಖಂಡಿತ ಬೇಕಾಗುತ್ತೆ. ಸಾಹಿತ್ಯ, ಕಾವ್ಯ ಎನ್ನುವುದು ಧ್ಯಾನವೋ ಅಲ್ಲವೋ ಅನ್ನುವ ಚರ್ಚೆಯನ್ನು ಪಕ್ಕಕ್ಕಿಡೋಣ. ಆದರೆ ಒಂದು ಏಕಾಂತದ ಅವಶ್ಯಕತೆ ಮನಸ್ಸಿಗಿದೆ. ನಿಮ್ಮೊಳಗೆ ನೀವು ಈ ಸ್ಪೇಸ್ ಕ್ರಿಯೇಟ್ ಮಾಡಿಕೊಳ್ಳುವುದಕ್ಕೆ ಏನಾದರು ವಿಶೇಷ ಪ್ರಯತ್ನವಿದೆಯೇ? ಅದು ಅನಾಯಾಸವಾಗಿ ದೊರಕುತ್ತಾ?**

ನಾನು ಒಂದು ಮಟ್ಟದ ಪ್ರಯತ್ನ ಮಾಡುತ್ತೇನೆ. ನೀವು ಹೇಳಿದ ಮನಸ್ಸಿನ ಏಕಾಂತ ನನಗೆ ಬಹಳ ಮುಖ್ಯ. ಭೌತಿಕ ಏಕಾಂತ ಅಷ್ಟು ಮುಖ್ಯ ಅಲ್ಲ. ಎಂಥ ಗದ್ದಲದಲ್ಲೂ ನಾನು ಬರೆಯಬಲ್ಲೆ. ನೀವು ಕವಿತೆಗಳನ್ನು ಬರೆಯೋದ್ರಿಂದ ನಿಮಗಿದು ಗೊತ್ತಿರುತ್ತೆ, ಒಂದು ಪದ ಅಥವಾ ಸಾಲು ಬಂದ ನಂತರ ಮತ್ತೊಂದು ಅದರ ಹಿಂದೆಯೇ ಹುಟ್ಟುತ್ತದೆ. ಅದು ಹೇಗೆ ಅಂತ ಗೊತ್ತಾಗೋದಿಲ್ಲ. ಶಬ್ದದಿಂದ ಶಬ್ದ ಹುಟ್ಟುವ ಆ ಓಘಕ್ಕೆ ಬೇಕಾದ ಏಕಾಗ್ರತೆ ಬೇರೆ ಬಗೆಯದು. ಒಂದೇ ವಸ್ತುವಿನ ಜೊತೆ ಸತತವಾಗಿ ತೊಡಗಿರುವುದರಿಂದ ಅದು ದೊರೆಯುತ್ತದೆ.

- **ಕಲೆಯ ಬೇರೆ ಯಾವ ಕ್ಷೇತ್ರ ನಿಮ್ಮನ್ನು ತಟ್ಟಿದೆ?**

ಅಭಿರುಚಿಯ ಕ್ಷೇತ್ರಗಳು ಹಲವಾರಿವೆ. ಆದರೆ ಯಕ್ಷಗಾನ ಮತ್ತು ತಾಳಮದ್ದಲೆ ನನ್ನನ್ನು ಅತ್ಯಂತ